ಈ) ಗುರುತಿಸಿರುವ ಸ್ಥಳಗಳಲ್ಲಿ ಬಡಾವಣೆ ರಚನೆ ಮಾಡಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮಾವಳಿಗಳಂತೆ ಹಂಚಿಕೆ ಮಾಡಲಾಗುವುದು.

ಉ) ವಸತಿ ಬಡಾವಣೆ ರಚನೆ ಮಾಡಿ, ಹಂಚಿಕೆ ಮಾಡಲು ಕ್ರಮವಹಿಸಲಾಗುವುದು.

458 ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕು ವೈದ್ಯನಾಥಪುರ–ಆಲೂರು ಸೇತುವೆಯು ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸೇತುವೆಯ ಪುನರ್ ನಿರ್ಮಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ವೈದ್ಯನಾಥಪುರ–ಆಲೂರು ಸೇತುವೆ ನಿರ್ಮಾಣಕ್ಕಾಗಿ ಸರ್ಕಾರ ಅಂದಾಜು ಪಟ್ಟಿ ತಯಾರಿಸಿದೆಯೇ;

ಈ) ಹಾಗಿದ್ದಲ್ಲಿ, ಈ ಸೇತುವೆ ಮರು ನಿರ್ಮಾಣಕ್ಕಾಗಿ ಸರ್ಕಾರ ನಿಗದಿಪಡಿಸಿದ ಅನುದಾನ ಮೊತ್ತವೆಷ್ಟು;

ಉ) ಈ ಸೇತುವೆಯ ಮರು ನಿರ್ಮಾಣ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಈ ಸೇತುವೆ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2ನೇ ಹಂತದ ಸೇತುವೆಯ ಯೋಜನೆಯ ಅಡಿಯಲ್ಲಿ 125 ಲಕ್ಷ ರೂ.ಗಳ ಅಂದಾಜು ಮೊತ್ತದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು. ಆದರೆ, ಸರ್ವೆ ಮತ್ತು ಮಣ್ಣಿನ ಪರೀಕ್ಷೆಯನ್ವಯ ಸೇತುವೆಯ ವಿನ್ಯಾಸ ಮಾಡಿ ಅಂದಾಜು ತಯಾರಿಸಿದಾಗ ಅಂದಾಜು ಮೊತ್ತವು 10 ಕೋಟಿ ರೂ.ಗಳಾಗುತ್ತವೆ. ಈ ಸೇತುವೆಯ ನಿರ್ಮಾಣವನ್ನು ಅನುದಾನದ ಲಭ್ಯತೆ ಮೇರೆಗೆ ತೆಗೆದುಕೊಳ್ಳಲು ಪರಶೀಲಿಸಲಾಗುತ್ತಿದೆ.

ಇ) ಈ ಸೇತುವೆಯ ನಿರ್ಮಾಣಕ್ಕೆ ಅಂದಾಜು ಪಟ್ಟಿಯನ್ನು 10.00 ಕೋಟಿ ರೂ.ಗಳಿಗೆ ತಯಾರಿಸಲಾಗಿದೆ.

ಈ) ಪರಿಶೀಲನೆಯಲ್ಲಿದೆ.

ಊ) ಅನುದಾನದ ಲಭ್ಯತೆಯ ಮೇರೆಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

282 ಶ್ರೀ ಸುಭಾಷ ಆರ್.ಗುತ್ತೇದಾರ್ (ಆಳಂದ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ–ಕುಲಾಲಿ 12ನೇ ಕಿ.ಮೀಟರ್‌ನಲ್ಲಿ ಕೆ.ಆರ್.ಡಿ.ಸಿ.ಎಲ್. ನವರು ಸೇತುವೆ ನಿರ್ಮಾಣ ಮಾಡಲು ಎರಡನೇ ಸ್ಟೇಜ್‌ನಲ್ಲಿ ಭೂಸ್ವಾಧೀನ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು; (ವಿವರಗಳನ್ನು ನೀಡುವುದು);

ಇ) ಈಗ 4ನೇ ಸ್ಟೇಜ್‌ನಲ್ಲಿ ಸದರಿ ರಸ್ತೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ;

ಈ) ಹಾಗಿದ್ದಲ್ಲಿ, ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸ ಲಾಗುವುದು;

ಉ) ಬ್ರಿಡ್ಜ್ ಕಾಮಗಾರಿಯನ್ನು ಪ್ರಾರಂಭಿಸದಿದ್ದರೆ ಆ ಭಾಗದ 8–10 ಗ್ರಾಮಗಳು ಸಂಪರ್ಕವನ್ನೇ ಕಳೆದುಕೊಳ್ಳುವುದರಿಂದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಈ ಸೇತುವೆಯ ಮೇಲ್ಭಾಗದ ಮತ್ತು ಕೆಳಭಾಗದಲ್ಲಿನ ಜಮೀನಿನ ಮಾಲೀಕರು ಸೇತುವೆಯನ್ನು ನಿರ್ಮಿಸಲು ಅಡಚಣೆ ಉಂಟುಮಾಡಿ ಭೂಮಿಯನ್ನು ನೀಡಲು ನಿರಾಕರಿಸಿರುತ್ತಾರೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಭೂಮಾಲೀಕರನ್ನು ಸಂಪರ್ಕಿಸಿ, ಸರ್ವೆ ಮಾಡಿಸಿ ಸಹಕಾರ ನೀಡುವಂತೆ ತಹಸೀಲ್ದಾರ್, ಆಳಂದ ತಾಲ್ಲೂಕು ಇವರನ್ನು ಪತ್ರಗಳ ಮೂಲಕ ಕೋರಲಾಗಿದೆ.

ಇ) ಈ ಸೇತುವೆ ಕಾಮಗಾರಿಯನ್ನು 4ನೇ ಹಂತದಲ್ಲಿ ತೆಗೆದುಕೊಳ್ಳಲು ಅನುದಾನದ ಲಭ್ಯತೆ ಇರುವುದಿಲ್ಲ.

ಈ) ಮತ್ತು ಉ) ಅನುದಾನದ ಲಭ್ಯತೆಯನ್ನಾಧರಿಸಿ ಮುಂದಿನ ಸೇತುವೆ ಯೋಜನೆಯಡಿ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗದು.